# ಫ್ಯಾಶನ್‌ಪ್ರಿಯ ಕೊಹ್ಲಿ

ಭಾರತದ ಕ್ರಿಕೆಟ್ ತಂಡ, ಟ್ವೆಂಟಿ– 20 ಪಂದ್ಯಗಳಲ್ಲಿ ದೊಡ್ಡ ಮೊತ್ತವನ್ನು ಬೆನ್ನಟ್ಟಿ ಜಯ ಸಾಧಿಸಬೇಕೆಂದರೆ ಅಲ್ಲಿ ವಿರಾಟ್ ಕೊಹ್ಲಿ ಇರಲೇಬೇಕು ಎನ್ನುವುದೊಂದು ನಿಯಮವೇ ಆಗಿದೆ! ಅಷ್ಟರ ಮಟ್ಟಿಗೆ ಕೊಹ್ಲಿ ವಿಶ್ವಾಸಾರ್ಹ ಕ್ರಿಕೆಟಿಗ. ಕ್ರಿಕೆಟ್‌ನ ತಾಂತ್ರಿಕ ಅಂಶಗಳನ್ನು ಕರಗತ ಮಾಡಿಕೊಂಡೇ ಈತ ಸಿಡಿಸುವ ಭರ್ಜರಿ ಹೊಡೆತಗಳನ್ನು ಎದುರಾಳಿ ಬೌಲರ್ ನಿರೀಕ್ಷಿಸುವುದೂ ಕಷ್ಟ. ಬೆನ್ನಟ್ಟುವಾಗ ಕೊಹ್ಲಿ ಕ್ರೀಸ್‌ನಲ್ಲಿದ್ದರೆ ಭಾರತೀಯ ಪ್ರೇಕ್ಷಕರೂ ನಿಶ್ಚಿಂತರಾಗಿರುತ್ತಾರೆ!

ಇದೀಗ ಮೈದಾನದ ಹೊರಗೂ ಕೊಹ್ಲಿ ಬೆನ್ನಟ್ಟಿ ಯಶ ಗಳಿಸಿದ ಸುದ್ದಿ ಬಂದಿದೆ. ಅದು ಬಾಲಿವುಡ್ ನಟಿ ಅನೂಷ್ಕಾ ಶರ್ಮಾ ಜತೆಗಿನ ಆತನ ಗೆಳೆತನ. ಇಬ್ಬರೂ ಗುಟ್ಟಾಗಿ ತೆಕ್ಕೆಬಿದ್ದು ತಿರುಗಾಡುವುದನ್ನು ಕಂಡವರು ಸಾಕಷ್ಟು ಜನರಿದ್ದಾರೆ. ಆದರೆ ಈ ಕುರಿತ ಪ್ರಶ್ನೆಗಳನ್ನು ಕೊಹ್ಲಿ ಜಾಣತನದಿಂದಲೇ ನಿವಾರಿಸುತ್ತಿದ್ದರು. ಕಳೆದ ವಾರ ಮಾತ್ರ ಕೊಹ್ಲಿ ಗಟ್ಟಿ ಸ್ವರದಲ್ಲಿ ಮಾತನಾಡಿದ್ದಾರೆ. ಆದರೆ ಕೊಹ್ಲಿ ಎಷ್ಟು ನೇರವಾಗಿ, ಗಂಭೀರವಾಗಿ ಮಾತನಾಡಿದರೆಂದರೆ.. ಪ್ರಶ್ನೆ ಕೇಳಿದ ಪತ್ರಕರ್ತರೂ 'ಹೌದಲ್ಲ!' ಎನ್ನುವಂತಿತ್ತು.

'ಏನಿದೆಯೋ ಅದು ಎಲ್ಲರ ಎದುರಿಗಿದೆ. ನಾವು ಏನನ್ನೂ ಅಡಗಿಸಿ ಇಡುತ್ತಿಲ್ಲ. ಆದರೆ ನೀವು ಪದೇ ಪದೇ ಅದೇ ವಿಷಯಕ್ಕೆ ಸಂಬಂಧಿಸಿ ಪ್ರಶ್ನೆಗಳನ್ನು ಕೇಳಿದರೆ ಅದೊಂದು ಚರ್ಚೆಯ ವಿಷಯ ಆಗುತ್ತದೆ. ಇದರಿಂದ ನಮಗೆ ಇಬ್ಬರಿಗೂ ಒಳ್ಳೆಯದಾಗುವುದಿಲ್ಲ ಅನಿಸುತ್ತದೆ' ಎಂದು ಕೊಹ್ಲಿ ಉತ್ತರಿಸಿದಾಗ, ಮುಂದಿನ ಪ್ರಶ್ನೆ ಏನು ಕೇಳಬೇಕೆಂಬುದೇ ಪತ್ರಕರ್ತರಿಗೆ ಗೊತ್ತಾಗಲಿಲ್ಲ! ಅಷ್ಟಕ್ಕೇ ಸುಮ್ಮನಾಗದ ಕೊಹ್ಲಿ, 'ನಿಮಗೆ ಗೊತ್ತಿದೆ ಎಂದ ಮೇಲೆ ಅದೇ ಅದೇ ಪ್ರಶ್ನೆಯನ್ನು ಮತ್ತೆ ಮತ್ತೆ ಏಕೆ ಕೇಳುತ್ತೀರಿ? ಓಕೆ, ದೃಢೀಕರಣಕ್ಕೆಂದು ಒಮ್ಮೆ ಕೇಳಿದಿರಿ ಎಂದಿಟ್ಟುಕೊಳ್ಳೋಣ. ಆ ಬಳಿಕವೂ ನಾವೇಕೆ ಅದರ ಬಗ್ಗೆ ಮಾತನಾಡೋದಿಲ್ಲ ಎಂದರೆ ಅದು ನಮ್ಮ ತೀರಾ ವೈಯಕ್ತಿಕ ವಿಷಯ. ಅದನ್ನು ನೀವು ಗೌರವಿಸಬೇಕಲ್ಲ..' ಎಂದೂ ಹೇಳಿದ್ದಾರೆ. ಅಲ್ಲಿಗೆ ಪತ್ರಕರ್ತರ ಕುತೂಹಲ ತಣಿದಂತೆಯೇ!

ಈ ಪ್ರಪಂಚದಲ್ಲಿ ಯಾವುದೂ ಸರಿ ಅಥವಾ ತಪ್ಪು ಎನ್ನುವುದಿಲ್ಲ. ನಿಮಗೆ ಒಂದು ವಿಷಯ ಸರಿ ಎನ್ನಿಸಿದರೆ ಅದನ್ನೇ ಮಾಡಿ, ಯಶಸ್ಸು ಪಡೆಯುತ್ತೀರಿ– ಎನ್ನುವುದು ಕೊಹ್ಲಿಯ ಇನ್ನೊಂದು ಹಾರ್ಡ್‌ಟಾಕ್. ಇನ್ನೂ 26ರ ಹರೆಯದ ಕೊಹ್ಲಿ (ಬರ್ತ್‌ಡೇ 5–11–1988) ಹೀಗೆ ದಾಢಸಿತನದಿಂದ ಮಾತನಾಡುವುದು ಆತನ ವ್ಯಕ್ತಿತ್ವಕ್ಕೆ ತಕ್ಕಂತೆಯೇ ಇದೆ. ಇಲ್ಲವಾದಲ್ಲಿ ಒಂದು ದಿನದ ಪಂದ್ಯದಲ್ಲಿ ಭಾರತೀಯನೊಬ್ಬನ ಅತ್ಯಂತ ವೇಗದ ಶತಕದ ದಾಖಲೆ ನಿರ್ಮಿಸಲು ಸಾಧ್ಯ ಆಗುತ್ತಿರಲಿಲ್ಲವೇನೊ? 2008ರಲ್ಲಿ 19ರ ಕೆಳಗಿನವರ ವಿಶ್ವಕಪ್ ತಂಡದ ನಾಯಕನಾಗಿ ಮಲೇಷ್ಯಾದಲ್ಲಿ ಟ್ರೋಫಿ ಗೆದ್ದಾಗಲೇ ಈತನ ನಾಯಕತ್ವದ ಸಾಮರ್ಥ್ಯದ ಬಗ್ಗೆ ಮೆಚ್ಚುಗೆಯ ಮಾತುಗಳು ಕೇಳಿಬಂದಿದ್ದವು. ಹಾಗಾಗಿ ಅದೇ ವರ್ಷ ಒಂದು ದಿನದ ಭಾರತೀಯ ತಂಡಕ್ಕೂ ಪ್ರವೇಶ ಸಿಕ್ಕಿತು. ಆದರೆ ಟೆಸ್ಟ್‌ನಲ್ಲಿ ಆಡಬೇಕೆಂದರೆ ಈತ ಮತ್ತೂ ಮೂರು ವರ್ಷ ಕಾಯಬೇಕಾಯಿತು.



ವಿರಾಟ್ ಕೊಹ್ಲಿ ಜಗತ್ತಿನ ಅಥ್ಲೀಟ್‌ಗಳ ಪೈಕಿ ಎರಡನೆಯ ಅತ್ಯಂತ ಮಾರ್ಕೆಟಬಲ್ ಆಟಗಾರ ಎನ್ನುವುದು ಈಗಾಗಲೇ ಬಹಿರಂಗಗೊಂಡಿದೆ. ಆಸ್ಪನ್ ಮಾರ್ಟಿನ್, ಎಡ್ ಹಾರ್ಡಿ ಮುಂತಾದ ಬ್ರ್ಯಾಂಡ್ ಶರ್ಟ್‌ಗಳ ಕಡುಮೋಹಿಯಾಗಿದ್ದ ಕೊಹ್ಲಿ, ಇದೀಗ ತನ್ನದೇ ಆದ ಹೊಸ ಫ್ಯಾಶನ್ ಬ್ರ್ಯಾಂಡ್‌ಅನ್ನು ಆರಂಭಿಸಿದ್ದಾನೆ. ಆತನ ಹೊಸ ಡಿಸೈನ್‌ಗೆ ಅಮೆರಿಕನ್ ಗಾಯಕ, ನಟ ಜಸ್ಟಿನ್ ಟಿಂಬರ್‌ಲೇಕ್ ಸ್ಫೂರ್ತಿ. ಈ ಹೊಸ ಬ್ರ್ಯಾಂಡ್‌ಗೆ ಹೆಸರು ನೀಡುವಾಗಲೂ ಕೊಹ್ಲಿ ಬುದ್ಧಿವಂತಿಕೆ ಬಳಸಿದ್ದಾನೆ. **Wrong** ಎನ್ನುವ ಇಂಗ್ಲಿಷಿನ ಶಬ್ದವನ್ನು **wrogn** ಬದಲಾಯಿಸಿಕೊಂಡಿದ್ದಾನೆ. ಏನಪ್ಪಾ ಅದರ ಅರ್ಥ.. ಎಂದು ಕೇಳಿದರೆ, 'ನನ್ನನ್ನು ಮೊದಲೆಲ್ಲ ಜನರು **Wrong** ಆಗಿ ಅರ್ಥೈಸಿಕೊಂಡಿದ್ದರು. ಬಳಿಕ ನಿಧಾನಕ್ಕೆ ಸರಿಯಾಗಿ ಅರ್ಥ ಮಾಡಿಕೊಂಡರು. ಅದಕ್ಕೆಂದೇ ಈ ಹೊಸ ಹೆಸರು' ಎನ್ನುತ್ತಾನೆ. ಮೈಮೇಲೆ ಗೋಲ್ಡನ್ ಡ್ರ್ಯಾಗನ್ ಹಚ್ಚೆ ಹಾಕಿಸಿಕೊಳ್ಳುವ ಈತನ ಫ್ಯಾಶನ್ ಪ್ರಯೋಗ **Wrong** ಆಗಲಿಕ್ಕಿಲ್ಲ ಎನ್ನುವುದಂತೂ ನಿಜ. ಕ್ರಿಕೆಟ್‌ನಲ್ಲಿ ಮಾಡಿರುವ ಹೆಸರು ಬಟ್ಟೆ ವ್ಯಾಪಾರದಲ್ಲಿ ಖಂಡಿತಾ ದುಡ್ಡು ತಂದುಕೊಡಲಿದೆ.

ಸಿನಿಮಾ ನಟಿಯ ಜತೆಗೆ ವಾಸಿಸುತ್ತಿದ್ದರೂ ಕೊಹ್ಲಿ ಸಿನಿಮಾದ ನಟನೆಗೆ ಇಳಿಯುವುದಿಲ್ಲವಂತೆ. ಹಾಗೆಂದು ಖಡಾಖಂಡಿತವಾಗಿ ಹೇಳಿದ್ದಾನೆ. ಹಿಂದೆ ಹೀಗೆ ಹೇಳಿ ಬಳಿಕ ಮರೆತವರ ಪಟ್ಟಿ ದೊಡ್ಡದಿದೆ. ಆದರೆ ಸದ್ಯಕ್ಕಂತೂ ಕೊಹ್ಲಿಯನ್ನು ನಂಬಲಡ್ಡಿಯಿಲ್ಲ. ಏಕೆಂದರೆ ಆತನಿನ್ನೂ ಪೂರ್ಣ ಪ್ರಮಾಣದಲ್ಲಿ ದೋನಿಯ ಸ್ಥಾನವನ್ನು ತುಂಬಿಲ್ಲ.

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65